## ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಸಿಟಿ ರವಿ ಇವರು ನಿಯಮ 330ರಡಿಯಲ್ಲಿ ಮಂಡಿಸಿರುವ ಗಮನಸೆಳೆಯುವ ಸೂಚನೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ.**

**ಸೂಚನೆ:**

ಕಳೆದ ಒಂದೂವರೆ ತಿಂಗಳ ಹಿಂದ ಬೂಚೇನಹಳ್ಳಿ ಕಾವಲು ಗ್ರಾಮದಲ್ಲಿ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಪಾಲ್ಗೊಂಡಿದ್ದ ಭಕ್ತರಹಳ್ಳಿ ಗ್ರಾಮದ ದೇವರಾಜು ಎಂಬುವವರಿಗೆ ಆರೋಗ್ಯ ತಪಾಸಣೆ ಮಾಡಿ ನಿಮಗೆ ಹೃದಯ ಸಮಸ್ಯೆ ಇದ್ದು, ಹೆಚ್ಚಿನ ತಪಾಸಣೆಗಾಗಿ ಬೆಂಗಳೂರಿಗೆ ಬರಬೇಕು ಎಂದು ಹೇಳಿ 15 ದಿನದ ನಂತರ ಚಿಕ್ಕಮಗಳೂರಿನಿಂದ ಬೆಂಗಳೂರಿನ ಸಪ್ತಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.

ಸುಮಾರು 2000 ತೆಂಗಿನಕಾಯಿ ಕೆಡವಿ ಹಾಕಿ ಹೊರಟಿದ್ದ ದೇವರಾಜುರವರಿಗೆ ಬೆಂಗಳೂರಿಗೆ ಹೋದ ನಂತರ ಇವರಿಗೆ ಸ್ಟಂಟ್ ಹಾಕಬೇಕೆಂದು ಹೇಳಿ ಹೋದ 2 ದಿನದಲ್ಲಿ 3 ಸ್ಟಂಟ್ ಅಳವಡಿಸಿ ಎರಡು ದಿನ ಆಸ್ಪತ್ರೆಯಲ್ಲಿಟ್ಟುಕೊಂಡು ನಂತರ ಡಿಸ್ಚಾರ್ಜ್ ಮಾಡಿ ಕಳುಹಿಸಿರುತ್ತಾರೆ. ಊರಿಗೆ ಬಂದ ನಂತರ ಒಂದು ದಿನದಲ್ಲಿ ದೇವರಾಜುರವರಿಗೆ ತೀವ್ರ ಆರೋಗ್ಯ ಸಮಸ್ಯೆ ಎದುರಾಗಿದೆ. ಅವರನ್ನು ಜಾವಗಲ್ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಇವರಿಗೆ ಹೃದಯಾಘಾತ ಆಗುವ ಸಂಭವವಿದ್ದು ಇವರನ್ನು ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ತಿಳಿಸಿದ್ದರಿಂದ ಅವರನ್ನು ಚಿಕ್ಕಮಗಳೂರು ನಗರದ ಅನುರಾಧ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ, ಇವರಿಗೆ ಮ್ಯಾಸಿವ್ ಹಾರ್ಟ್ ಅಟ್ಯಾಕ್ ಆಗಿದ್ದು, ತಕ್ಷಣ ಸೌಲಭ್ಯವಿರುವ ಯಾವುದಾದರೂ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ತಿಳಿಸಿದ್ದರಿಂದ ನಗರದ ಕೆ.ಆರ್.ಎಸ್. ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.

ಅಲ್ಲಿ ಇವರಿಗೆ ಸ್ಟಂಟ್ ಹಾಕುವ ಅಗತ್ಯವಿದೆ ಇದಕ್ಕೆ 3 ಲಕ್ಷ ವೆಚ್ಚವಾಗಬಹುದೆಂದು ಪ್ರಾರಂಭದಲ್ಲಿ ತಿಳಿಸಿದ್ದು, ನಮ್ಮಲ್ಲಿ ಆಯುಷ್ಮಾನ್ ಕಾರ್ಡ್ ಇರುವುದಾಗಿ ರೋಗಿಯ ಕಡೆಯವರು ತಿಳಿಸಿದಾಗ ಆಸ್ಪತ್ರೆಯಲ್ಲಿ ಪರಿಶೀಲಿಸಿದಾಗ ಸುಮಾರು 3,80,000/- ರೂ.ಗಳನ್ನು ಸಪ್ತಗಿರಿ ಆಸ್ಪತ್ರೆಯಲ್ಲಿ ಕ್ಲೈಮ್ ಮಾಡಲಾಗಿದ್ದು, ಪುನಃ ಇಲ್ಲಿ ಕ್ಲೈಮ್ ಮಾಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ನಂತರ ಈಗಾಗಲೇ ಇವರಿಗೆ 3 ಸ್ಟಂಟ್ ಹಾಕಲಾಗಿದ್ದು, ಆ ಸ್ಟಂಟ್ ಗಳು ಸರಿಯಾಗಿ ಅಳವಡಿಸಿಲ್ಲವಾದ್ದರಿಂದ ಪುನಃ ಬಲೂನ್ ಸ್ಟಂಟ್ ಹಾಕಿ ಸರಿಪಡಿಸಬೇಕೆಂದು ತಿಳಿಸಿ ಅದಕ್ಕಾಗಿ ಸುಮಾರು 1,20,000/- ವೆಚ್ಚವಾಗಬಹುದು (ಔಷಧಿ ಹಾಗೂ ಬೆಡ್ ಚಾರ್ಜ್ ಹೊರತುಪಡಿಸಿ) ಎಂದು ತಿಳಿಸಿ ಸ್ಟಂಟ್ ಹಾಕದೇ ಬೇರೆ ಚಿಕಿತ್ಸೆ ನೀಡಿ ಸುಮಾರು 1,30,000/- ರೂ ಬಿಲ್ ಕಟ್ಟಿಸಿಕೊಂಡು ಡಿಸ್ಚಾರ್ಜ್ ಮಾಡಿ ಕಳಿಸಲಾಗಿದೆ. ಈ ಮನುಷ್ಯನ ಆರೋಗ್ಯ ಇಂದಿಗೂ ಸುಧಾರಿಸಿಲ್ಲ. ಈ ರೀತಿ ಆರೋಗ್ಯವಾಗಿದ್ದ ಅಮಾಯಕ ಮನುಷ್ಯನಿಗೆ ಉಚಿತ ಚಿಕಿತ್ಸೆ ನೀಡುವ ನೆಪದಲ್ಲಿ ಈ ರೀತಿ ಮಾಡಿರುವ ಆಸ್ಪತ್ರೆಗಳ ವಿರುದ್ಧ ಪರಿಶೀಲಿಸಿ ಕ್ರಮ ಜರುಗಿಸಬೇಕು ಎಂದು ಸರ್ಕಾರದ ಗಮನ ಸೆಳೆಯುತ್ತೇನೆ.

**ಹೇಳಿಕೆ:**

1. ಆಯುಷ್ಮಾನ್ ಭಾರತ್ ಪ್ರಧಾನಮಂತ್ರಿ ಜನಾರೋಗ್ಯ ಯೋಜನೆ – ಮುಖ್ಯಮಂತ್ರಿ ಆರೋಗ್ಯ ಕರ್ನಾಟಕ (AB PMJAY–CM's Arogya Karnataka / ABARK) ಯೋಜನೆಯಡಿ ರಾಜ್ಯದಲ್ಲಿ 2965

ಸರ್ಕಾರಿ ಹಾಗೂ 536 ಖಾಸಗಿ ಆಸ್ಪತ್ರೆಗಳು ನೋಂದಾಯಿತವಾಗಿದ್ದು, ಫಲಾನುಭವಿಗಳಿಗೆ ಉಚಿತ ಹಾಗೂ ಗುಣಮಟ್ಟದ ಚಿಕಿತ್ಸೆಯನ್ನು ಒದಗಿಸಲಾಗುತ್ತಿದೆ. ಯೋಜನೆಯಡಿ ಚಿಕಿತ್ಸೆಗೆ ಸಂಬಂಧಿಸಿದಂತೆ ಫಲಾನುಭವಿಗಳಿಂದ ಯಾವುದೇ ಹೆಚ್ಚುವರಿ ಹಣ ವಸೂಲಾತಿ ಆಗದಂತೆ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:

- ಆಸ್ಪತ್ರೆಗಳಲ್ಲಿ ನಿಯೋಜಿಸಲಾದ ಆರೋಗ್ಯ ಮಿತ್ರರ ಮೂಲಕ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯಗಳ ಕುರಿತು ಅಗತ್ಯ ಮಾಹಿತಿ ಹಾಗೂ ಮಾರ್ಗದರ್ಶನ ನೀಡಲಾಗುತ್ತದೆ.

- ಚಿಕಿತ್ಸೆಗಾಗಿ ಅನುಮೋದಿಸಲಾದ ಮೊತ್ತದ ವಿವರವನ್ನು SMS ಮೂಲಕ ಫಲಾನುಭವಿಗಳಿಗೆ ತಿಳಿಸಲಾಗುತ್ತದೆ.

- ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಕಾಲ್ ಸೆಂಟರ್ ಮೂಲಕ ಫಲಾನುಭವಿಗಳನ್ನು ಸಂಪರ್ಕಿಸಿ ಹೆಚ್ಚುವರಿ ಹಣ ವಸೂಲಾತಿ ನಡೆದಿರುವ ಬಗ್ಗೆ ಪರಿಶೀಲಿಸಲಾಗುತ್ತದೆ.

- ಹೆಚ್ಚುವರಿ ಹಣ ವಸೂಲಾತಿ ನಡೆದಿರುವುದು ದೃಢಪಟ್ಟಲ್ಲಿ, ಸಂಬಂಧಿತ ಆಸ್ಪತ್ರೆಗಳಿಂದ ಫಲಾನುಭವಿಗಳಿಗೆ ಹಣವನ್ನು ಮರುಪಾವತಿಸಲು ಸೂಚಿಸಲಾಗುತ್ತದೆ ಹಾಗೂ ಒಡಂಬಡಿಕೆಯ ನಿಯಮಾವಳಿಗಳ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ.

ಇದಲ್ಲದೆ, ಅಕ್ರಮಗಳನ್ನು ತಡೆಗಟ್ಟುವ ಉದ್ದೇಶದಿಂದ ಆಸ್ಪತ್ರೆಗಳ ಕಾರ್ಯವೈಖರಿಯನ್ನು ವಿವಿಧ ಪರಿಶೀಲನಾ ವ್ಯವಸ್ಥೆಗಳ (Audit Mechanisms) ಮೂಲಕ ನಿರಂತರವಾಗಿ ಮೇಲ್ವಿಚಾರಣೆ ಮಾಡಲಾಗುತ್ತಿದೆ. ಅದರಂತೆ, ನಿಗದಿತ ಪ್ರಮಾಣದ (5%) ಚಿಕಿತ್ಸೆ ಪಡೆದ ಫಲಾನುಭವಿಗಳ ಮೆಡಿಕಲ್ ಆಡಿಟ್ (Medical Audit) ನಡೆಸಲಾಗುತ್ತದೆ. ಇದಲ್ಲದೆ, ಚಿಕಿತ್ಸೆಯ ಸಂದರ್ಭದಲ್ಲಿ ಮರಣ ಹೊಂದಿದ ಫಲಾನುಭವಿಗಳ (100%) ಪ್ರಕರಣಗಳಿಗೆ ಮರಣ ಸಂಬಂಧಿತ ಆಡಿಟ್ (Death Audit) ಕಡ್ಡಾಯವಾಗಿ ನಡೆಸಲಾಗುತ್ತದೆ.

2. ಫಲಾನುಭವಿಗಳ ಪರಿಶೀಲನೆ (Beneficiary Audit) ಹಾಗೂ ಹೆಚ್ಚುವರಿ ಹಣ ವಸೂಲಾತಿಗೆ ಸಂಬಂಧಿಸಿದ ದೂರುಗಳನ್ನು ಪರಿಶೀಲಿಸಿ ಪರಿಹರಿಸುವ ಉದ್ದೇಶದಿಂದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಕುಂದುಕೊರತೆ ಪರಿಹಾರ ಸಮಿತಿ (DGRC) ಹಾಗೂ ರಾಜ್ಯ ಮಟ್ಟದಲ್ಲಿ ರಾಜ್ಯ ಕುಂದುಕೊರತೆ ಪರಿಹಾರ ಸಮಿತಿ (SGRC) ರಚಿಸಲಾಗಿದ್ದು, ಸದರಿ ಸಮಿತಿಗಳಲ್ಲಿ ಪ್ರಕರಣಗಳನ್ನು ಪರಿಶೀಲಿಸಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ.

3. ಫಲಾನುಭವಿಗಳು ಹೆಚ್ಚುವರಿ ಹಣ ವಸೂಲಾತಿ ಸಂಬಂಧಿತ ದೂರುಗಳನ್ನು SAST Call Centre, **CGRMS (centralised grievance redressal management system), CPGRAMS (Centralised public grievance redress and monitoring system) ಹಾಗೂ iPGRS(Integrated Public Grievance Reddressal System)** ತಂತ್ರಾಂಶಗಳ ಮೂಲಕ ಸಲ್ಲಿಸಬಹುದಾಗಿದೆ. ಸ್ವೀಕರಿಸಲಾದ ದೂರುಗಳನ್ನು ನಿಗದಿತ ಅವಧಿಯೊಳಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತದೆ.

4. ಆಸ್ಪತ್ರೆಗಳ ವಿರುದ್ಧ ಉಂಟಾಗುವ ಅಕ್ರಮ ಅಥವಾ ವಂಚನೆ ಸಂಬಂಧಿತ ಪ್ರಕರಣಗಳನ್ನು ಪರಿಶೀಲಿಸಲು **State Anti-Fraud Unit (SAFU)** ಹಾಗೂ **Empanelment and Disciplinary Committee (EDC)** ರಚಿಸಲ್ಪಟ್ಟಿದ್ದು, ಈ ಸಮಿತಿಗಳಲ್ಲಿ ಪ್ರಕರಣಗಳನ್ನು ಸಮಗ್ರವಾಗಿ ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ.

ಶ್ರೀ ದೇವರಾಜು ಅವರಿಗೆ ಯೋಜನೆಯಡಿ ಸಮರ್ಪಕ ಚಿಕಿತ್ಸೆ ನೀಡದಿರುವ ಕುರಿತು ಉಲ್ಲೇಖಿಸಿರುವ ಹಿನ್ನೆಲೆಯಲ್ಲಿ, ಸಂಬಂಧಿತ ದಾಖಲೆಗಳನ್ನು ಪರಿಶೀಲಿಸಲಾಗಿದೆ.

ಶ್ರೀ ದೇವರಾಜು ಅವರು ABARK ಯೋಜನೆಯಡಿ ಸಪ್ತಗಿರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ (AB_ArK_H_1958633287587). ಈ ಪ್ರಕರಣಕ್ಕೆ ದಿನಾಂಕ 12.02.2026 ರಂದು ರೂ. 113849/- ಮೊತ್ತ ಮಂಜೂರು ಮಾಡಲಾಗಿದೆ. ಈ ರೋಗಿಗೆ ನಂತರ ಯಾವುದೇ ಪ್ರೀ-ಆಥರೈಜೆಷನ್ (Pre-Authorization) ಅರ್ಜಿ ಸಲ್ಲಿಸಲ್ಪಟ್ಟಿಲ್ಲ.ಆದಾಗ್ಯೂ, ಅಗತ್ಯವಿದ್ದಲ್ಲಿ ಹಾಗೂ ಚಿಕಿತ್ಸೆ ನೀಡುತ್ತಿರುವ ತಜ್ಞ ವೈದ್ಯರ ಶಿಫಾರಸ್ಸಿನ ಮೇರೆಗೆ, ಸಂಬಂಧಿತ ಚಿಕಿತ್ಸೆಗೆ ಮತ್ತೆ ಕ್ಲೈಮ್ ಸಲ್ಲಿಸಲು ಯಾವುದೇ ಅಡ್ಡಿಯಿಲ್ಲ. ಪಿಟಿಸಿಎ (ಪರ್ಕ್ಯೂಟೇನಿಯಸ್ ಟ್ರಾನ್ಸ್‌ಲ್ಯೂಮಿನಲ್ ಕೊರೊನರಿ ಅಂಜಿಯೋಪ್ಲಾಸ್ಟಿ) – ಹೃದಯದ ಕೊರೊನರಿ ರಕ್ತನಾಳದಲ್ಲಿ ಉಂಟಾಗಿರುವ ಅಡಚಣೆಯನ್ನು ತೆರವುಗೊಳಿಸಿ ರಕ್ತಪ್ರವಾಹವನ್ನು ಸುಧಾರಿಸಲು ಸ್ಟೆಂಟ್ ಅಳವಡಿಸುವ ಚಿಕಿತ್ಸಾ ವಿಧಾನದ ಚಿಕಿತ್ಸೆ ನಂತರ ಸಂಭವಿಸುವ ಮೈಕಾರ್ಡಿಯಲ್ ಇನ್ಫಾರ್ಕ್ಷನ್ (Myocardial Infarction) ರೋಗಿಯ ವೈಯಕ್ತಿಕ ಕಾರಣಗಳು, ತಾಂತ್ರಿಕ ಸಮಸ್ಯೆಗಳು ಅಥವಾ ಸ್ಟೆಂಟ್‌ಗೆ ಸಂಬಂಧಿಸಿದ ಕಾರಣಗಳಿಂದ ಸಂಭವಿಸಿರಬಹುದು. ಆದ್ದರಿಂದ, ರೆಸ್ಟೆನೋಸಿಸ್ (Restenosis) ಅಥವಾ ಯಾವುದೇ ಗುಣಮಟ್ಟದ ಸಮಸ್ಯೆಗಳ ಬಗ್ಗೆ ತಿಳಿದುಕೊಳ್ಳಲು ಈ ವಿಷಯವನ್ನು ವೈದ್ಯಕೀಯ ತಜ್ಞರ ಮೂಲಕ ಪರಿಶೀಲಿಸುವ ಅಗತ್ಯವಿದ್ದು, ಈ ಪ್ರಕರಣವನ್ನು ವೈದ್ಯಕೀಯ ತಜ್ಞರ ತಂಡದಿಂದ ಪರಿಶೀಲಿಸಿ, ವರದಿಯನ್ನು ಆಧರಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

**ಸಂಖ್ಯೆ: ಆಕುಕ 58 ಎಸ್.ಟಿ.ಕ್ಯೂ. 2026**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು